


## 21

## ಹಿಂಸೆ ಕುರುಡಾಗಿ ಕುಣಿಯುತಲಿತ್ತ...

ಶ್ರದ್ಧಾ ವಾಲ್ಕರ್ ಎನ್ನುವ ಯುವತಿಯನ್ನು ಆಕೆಯೊಂದಿಗೆ ‘ಸಹಜೀವನ’ ನಡೆಸುತ್ತಿದ್ದ ಸಂಗಾತಿಯೇ ಭೀಕರವಾಗಿ ಕೊಂದಿರುವ ಘಟನೆಯನ್ನು ಹಲವು ಆಯಾಮಗಳಿಂದ ನೋಡಬೇಕಾಗಿದೆ. ತನ್ನೊಂದಿಗೆ ಸಹಜೀವನ ನಡೆಸುತ್ತಿದ್ದ ಶ್ರದ್ಧಾ ವಾಲ್ಕರ್ ಎನ್ನುವ ಯುವತಿಯನ್ನು ಕೊಂದು, ಮೃತ ದೇಹವನ್ನು ಮೂವತ್ತೈದು ತುಣುಕುಗಳಾಗಿ ಕತ್ತರಿಸಿರುವ ಆರೋಪಿ, ದೇಹದ ತುಣುಕುಗಳನ್ನು ದೆಹಲಿಯ ಬೇರೆ ಬೇರೆ ಭಾಗಗಳಲ್ಲಿ ಎಸೆದಿದ್ದಾನೆ. ಮಹಿಳಾ ದೌರ್ಜನ್ಯ ನಿರಂತರವಾಗಿ ನಡೆಯುತ್ತಿರುವುದರ ಉದಾಹರಣೆಯಾಗಿ ನೋಡಬಹುದಾದ ಈ ಘಟನೆ, ಯುವಪೀಳಿಗೆ ಸಂಬಂಧಗಳ ಮೌಲ್ಯಗಳಿಗೆ ವಿಮುಖವಾಗಿರುವುದನ್ನೂ ಸೂಚಿಸುವಂತಿದೆ. ಅಂತರಂಗದ ಆರ್ದ್ರತೆಯೇ ಕಳೆದುಹೋಗಿ, ಹಿಂಸೆ ಹಾಗೂ ಕ್ರೌರ್ಯ ಸಮಾಜದಲ್ಲಿ ಬೇರುಬಿಟ್ಟಿರುವುದನ್ನೂ ದೆಹಲಿಯಿಂದ ವರದಿಯಾದ ಈ ಘಟನೆ ಸೂಚಿಸುವಂತಿದೆ. ದೇಶವನ್ನು ತಲ್ಲಣಗೊಳಿಸಿದ್ದ ‘ನಿರ್ಭಯಾ ಅತ್ಯಾಚಾರ ಪ್ರಕರಣ’ಕ್ಕೆ ಹತ್ತು ವರ್ಷಗಳು ತುಂಬಿವೆ. ಈ ಅವಧಿಯಲ್ಲಿ ಹೆಣ್ಣುಮಕ್ಕಳ ಮೇಲಿನ ಅತ್ಯಾಚಾರದ ಘಟನೆಗಳು ವರ್ಷದಿಂದ ವರ್ಷಕ್ಕೆ ಹೆಚ್ಚುತ್ತಲೇ ಇವೆ. ‘ವಿಶ್ವದಾದ್ಯಂತ ಪ್ರತಿ 11 ನಿಮಿಷಕ್ಕೆ ಓರ್ವ ಮಹಿಳೆ ಹತ್ಯೆಗೊಳಗಾಗುತ್ತಿದ್ದಾಳೆ’ ಎಂದು ವಿಶ್ವಸಂಸ್ಥೆಯ ಮಹಾಪ್ರಧಾನ ಕಾರ್ಯದರ್ಶಿ ಆಂಟೊನಿಯೊ ಗುಟೆರಸ್ ಇತ್ತೀಚೆಗೆ ಆತಂಕ ವ್ಯಕ್ತಪಡಿಸಿದ್ದರು. ‘ಈ ಹತ್ಯೆಗಳು ಬಹುತೇಕ ಸಂದರ್ಭಗಳಲ್ಲಿ, ನತದೃಷ್ಟ ಹೆಣ್ಣುಮಕ್ಕಳ ಸಂಗಾತಿ ಅಥವಾ ಕುಟುಂಬದ ಸದಸ್ಯರಿಂದಲೇ ನಡೆಯುತ್ತಿವೆ. ಹೆಣ್ಣುಮಕ್ಕಳನ್ನು ಮನೆಯಿಂದ ಹೊರಗೆ ಕಳುಹಿಸಲು ಅಳುಕುವ ಪೋಷಕರ ಸಂಖ್ಯೆ ಭಾರತದಲ್ಲಿ ದೊಡ್ಡದಿದೆ’ ಎಂದೂ ಗುಟೆರಸ್ ಹೇಳಿದ್ದರು.

ದೇಹವನ್ನು ತುಣುಕುಗಳನ್ನಾಗಿ ಕತ್ತರಿಸುವ ಬೇರೆ ಬೇರೆ ಉದಾಹರಣೆಗಳಿಗೆ 2022 ಸಾಕ್ಷಿಯಾಯಿತು. ಉತ್ತರ ಪ್ರದೇಶದ ಬಾವಿಯೊಂದರಲ್ಲಿ ಯುವತಿಯೊಬ್ಬಳ ದೇಹದ ನಾಲ್ಕು ತುಣುಕುಗಳು ದೊರೆತವು. ಉತ್ತರ ಪ್ರದೇಶದ ಮಥುರಾ ಜಿಲ್ಲೆಯ ಯಮುನಾ ಎಕ್ಸ್‌ಪ್ರೆಸ್‌ವೇ ಬಳಿ ತರುಣಿಯೊಬ್ಬಳ ಮೃತದೇಹ ಬ್ಯಾಗ್‌ನಲ್ಲಿ ಪತ್ತೆಯಾಯಿತು. ನಾವು ವಾಸಿಸುತ್ತಿರುವ ಸಮಾಜ ಹೆಣ್ಣುಮಕ್ಕಳ ಬಗ್ಗೆ ಎಷ್ಟು ನಿರ್ದಯವಾಗಿದೆ ಎನ್ನುವುದನ್ನು ಈ ಘಟನೆಗಳು ಸೂಚಿಸುವಂತಿವೆ.

## 22

## ‘ಟಾಟಾ’ ಮಡಿಲಿಗೆ ‘ಏರ್ ಇಂಡಿಯಾ’

ಸರ್ಕಾರಿ ಸ್ವಾಮ್ಯದ ಸಂಸ್ಥೆಯಾಗಿದ್ದ ‘ಏರ್ ಇಂಡಿಯಾ’ ನಷ್ಟದ ಹೊರೆಯಿಂದ ಬಸವಳಿದಿತ್ತು. ಅದರ ನಿರ್ವಹಣೆಗಾಗಿ ಸರ್ಕಾರ ಏದುಸಿರುಬಿಡುತ್ತಿತ್ತು. ಕೊರೊನಾ ಬಿಕ್ಕಟ್ಟಿನಿಂದಾಗಿ ‘ಏರ್ ಇಂಡಿಯಾ’ ಇನ್ನಷ್ಟು ಸಂಕಷ್ಟಕ್ಕೆ ಸಿಲುಕಿತ್ತು. ವೆಂಟಿಲೇಟರ್‌ನಲ್ಲಿದ್ದ ಏರ್ ಇಂಡಿಯಾಕ್ಕೆ ಈಗ ‘ಟಾಟಾ ಗ್ರೂಪ್’ ಜೀವದಾನ ಮಾಡಿದೆ. ರತನ್ ಟಾಟಾ ನೇತೃತ್ವದ ಟಾಟಾ ಸಂಸ್ಥೆ, ಏರ್ ಇಂಡಿಯಾವನ್ನು ಶೀಘ್ರದಲ್ಲೇ ದೇಶದ ಎರಡನೇ ಅತಿದೊಡ್ಡ ವಿಮಾನಯಾನ ಸಂಸ್ಥೆಯನ್ನಾಗಿ ರೂಪಾಂತರಿಸಲು ನಾನಾ ಕ್ರಮಗಳನ್ನು ಕೈಗೊಂಡಿದೆ. ಒಂದೇ ಬಾರಿಗೆ 500 ವಿಮಾನಗಳನ್ನು ಖರೀದಿಸಲು ಮುಂದಾಗಿದ್ದು, 8.2 ಲಕ್ಷ ಕೋಟಿ ರೂಪಾಯಿ ಹೂಡಿಕೆಗೆ ನಿರ್ಧರಿಸಿದೆ. ಅಂತರರಾಷ್ಟ್ರೀಯ ಮತ್ತು ದೇಶೀ ವಿಮಾನಯಾನ ಕ್ಷೇತ್ರದಲ್ಲಿ ದೊಡ್ಡ ಮಟ್ಟದಲ್ಲಿ ಮಾರುಕಟ್ಟೆ ವಿಸ್ತರಿಸಲು ಟಾಟಾ ಯೋಜನೆ ರೂಪಿಸಿದೆ.

ಏರ್ ಇಂಡಿಯಾ ಅನ್ನುವುದು ಟಾಟಾ ಪಾಲಿಗೆ ಹೆಮ್ಮೆಯ ಸಂಗತಿ. 1932ರಲ್ಲಿ ಆರ್‌ಜೆಡಿ ಟಾಟಾ ಸ್ಥಾಪಿಸಿದ್ದ ಏರ್ ಇಂಡಿಯಾವನ್ನು 1952ರಲ್ಲಿ ಕೇಂದ್ರ ಸರ್ಕಾರವು ರಾಷ್ಟ್ರೀಕರಣದ ಮೂಲಕ ತನ್ನ ತೆಕ್ಕೆಗೆ ಸೇರಿಸಿಕೊಂಡಿತ್ತು. 2022ರ ಜನವರಿಯಲ್ಲಿ ಏರ್ ಇಂಡಿಯಾವನ್ನು ಖರೀದಿಸಿರುವ ಟಾಟಾ ಗ್ರೂಪ್, ತನ್ನ ಏರ್‌ಲೈನ್ಸ್‌ಗಿದ್ದ ಗತ್ತು ಮತ್ತು ಗತವೈಭವವನ್ನು ಮರುಸ್ಥಾಪಿಸಲು ಪ್ರಯತ್ನಿಸಿದೆ. ಏತನ್ಮಧ್ಯೆ, ಏರ್ ಇಂಡಿಯಾದಲ್ಲಿ ‘ವಿಸ್ತಾರಾ ಏರ್‌ಲೈನ್ಸ್’ ಸಹ ವಿಲೀನವಾಗುತ್ತಿದೆ.



**ಪ್ರತಿಕ್ರಿಯಿಸಿ** ರಚನಾತ್ಮಕ ಟೀಕೆ–ಟಿಪ್ಪಣಿಗಳಿಗೆ ಸ್ವಾಗತ. ಪ್ರತಿಕ್ರಿಯೆ ಚುಟುಕು, ಚುರುಕಾಗಿರಲಿ. ಇ–ಮೇಲ್: feedback@sudha.co.in